ಕುಂದಾಪುರ ಸರ್ಕಲಿನಲ್ಲಿ ಮಟ್ಕಾ ಹಾವಳಿ

321 - ಶ್ರೀ ಕೆ. ಪ್ರಕಾಶ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕುಂದಾಪುರ ಸರ್ಕಲಿನಲ್ಲಿ ಮಟ್ಕಾ ಹಾವಳಿ ಬಗ್ಗೆ ಬಹಳಷ್ಟು ದೂರುಗಳು ಬಂದಿರುವುದು ನಿಜವೆ; ಬಂದರೂ ಸಹ ಕ್ರಮ ಕೈಗೊಳ್ಳದಿರಲು ಕಾರಣವೇನು?*

ಆ) *ಗುಪ್ತ ವರದಿ ಆಧಾರದ ಮೇಲೆ ಪೋಲೀಸರು ಹಫ್ತಾವನ್ನು ಪಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?*

ಇ) *ಇಂತಹ ಮಟ್ಕಾವನ್ನು ಕಟ್ಟುನಿಟ್ಟಾಗಿ ನಿಲ್ಲಿಸಲು ಸಂಬಂಧಪಟ್ಟ ಸರ್ಕಲ್ ಪೋಲೀಸ್ ಇನ್ಸ್‌ಪೆಕ್ಟರ್‌ರನ್ನು ಜವಾಬ್ದಾರಿಯನ್ನಾಗಿ ಮಾಡಲು ಸರ್ಕಾರವು ಪರಿಶೀಲಿಸುವರೇ?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಹೌದು. ಈ ಮಟ್ಕಾ ಹಾವಳಿಯ ಸುಳಿವು ದೊರೆತ ತಕ್ಷಣವೇ ಆ ಸ್ಥಳಗಳ ಮೇಲೆ ಅನಿರೀಕ್ಷಿತ ದಾಳಿಯನ್ನು ಮಾಡಲಾಗುತ್ತಿದೆ.

ಆ) ಇಲ್ಲ

ಇ) ಮಟ್ಕಾ ಜೂಜಾಟವನ್ನು ತಡೆಗಟ್ಟುವಂತೆ ಎಲ್ಲಾ ಪೋಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈ ಹಾವಳಿಯನ್ನು ತಡೆಗಟ್ಟಲು ವಿಫಲರಾದ ಸಂಬಂಧಪಟ್ಟ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್‌ಗಳನ್ನು ಜವಾಬ್ದಾರರನ್ನಾಗಿ ಮಾಡಲಾಗಿದೆ ಮತ್ತು ಅವರುಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಅಬಕಾರಿ ಕಾಯ್ದೆ 5ರ ಅಡಿ ಮದ್ಯದ ಅಂಗಡಿ ಮತ್ತು ಬಾರ್ ಸ್ಥಳಾಂತರ

564 - ಶ್ರೀ ರಮಾನಾಥ ರೈ (ಬಂಟ್ವಾಳ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕ ಅಬಕಾರಿ ಕಾಯ್ದೆ 5ರ ಅಡಿಯಲ್ಲಿ ಎಷ್ಟು ಮದ್ಯದ ಅಂಗಡಿ ಹಾಗೂ ಬಾರ್‌ಗಳನ್ನು ಸ್ಥಳಾಂತರಿಸಲಾಗಿದೆ?*

ಆ) *ಈ ಕಾನೂನು ತಿದ್ದುಪಡಿ ಮಾಡುವ ವಿಷಯ ಸರ್ಕಾರದವರ ಮುಂದಿದೆಯೇ?*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಸ್ಥಳಾಂತರಿಸಿದ ಮದ್ಯದ ಅಂಗಡಿ ಮತ್ತು ಬಾರ್‌ಗಳ ಸಂಖ್ಯೆ 219.

ಆ) ಇಲ್ಲ

ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಮಾಲತಿ ನದಿಗೆ ಅಣೆಕಟ್ಟು

106 - ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಮಾಲತಿ ನದಿಗೆ ಅಣೆಕಟ್ಟು ಕಟ್ಟುವ ಕಾಮಗಾರಿಯು ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಸೇರಿದೆಯೇ?*

ಆ) *ಹಾಗೂ ಸದರಿ ಯೋಜನೆಯಲ್ಲಿ ಮುಳುಗಡೆಯಾಗಲಿರುವ ಸಾಗುವಳಿ ಜಮೀನೆಷ್ಟು? (ತರಿ ಬಾಗಾಯ್ತು, ಖುಷ್ಕಿ, ವಿವರ ಒದಗಿಸುವುದು.)*

ಇ) *ಮುಳುಗಡೆ ಆಗುವ ಮನೆಗಳೆಷ್ಟು ಹಾಗೂ ಅರಣ್ಯ ಪ್ರದೇಶವೆಷ್ಟು?*

ಈ) *ಈ ಬಗ್ಗೆ ಇದುವರೆಗೂ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ತೀರ್ಥಹಳ್ಳಿ ತಾಲ್ಲೂಕಿನ ಕೆರೆಗಳ ದುರಸ್ತಿ

670 - ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿಯ ಇಲಾಖಾ ವ್ಯಾಪ್ತಿಗೆ ಒಳಪಡುವ ಕೆರೆಗಳೆಷ್ಟು? ಮತ್ತು ಯಾವುವು?

ಆ) ಇತ್ತೀಚಿನ ವರ್ಷಗಳಲ್ಲಿ ಇವುಗಳ ದುರಸ್ತಿ ಕಾರ್ಯಕ್ಕಾಗಿ ವಿನಿಯೋಗಿಸಿದ ಹಣವೆಷ್ಟು?

ಇ) ಈ ಕೆರೆಗಳು ದುರಸ್ತಿ ಆಗದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಈ) ಪ್ರಸಕ್ತ ಸಾಲಿನಲ್ಲಿ ಇವುಗಳ ದುರಸ್ತಿ ಕಾರ್ಯಕ್ಕಾಗಿ ಎಷ್ಟು ಹಣವನ್ನು ಮೀಸಲಿಡಲಾಗಿದೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯರು):

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ವ್ಯಾಪ್ತಿಗೆ ಒಟ್ಟು 9 ಕೆರೆಗಳು ಮತ್ತು 2 ಪಿಕಪ್‌ಗಳು ಬರುತ್ತವೆ. ಅವುಗಳ ವಿವರ ಈ ಕೆಳಕಂಡಂತೆ ಇದೆ.

1. ಬಸವಣ್ಣನ ಕೆರೆ 2. ಕೊಡಾನೂರು ದೊಡ್ಡ ಕೆರೆ 3. ತೋಟದ ಮೇಲಿನ ಕೆರೆ 4. ಬಕ್ಕಿ ಕೆರೆ 5. ಹಿಂದುವಾಡಿ ರಾಮಯ್ಯನ ಕೆರೆ 6. ಹಿಂದುವಾಡಿ ಸುವರ್ಣ ಕೆರೆ 7. ಯೋಗಿ ಮಳಲಿ ಗೊಗೆರ ಕೆರೆ 3. ಯಡವಟ್ಟಿ ಸುರವಿನ ಕೆರೆ 9. ಬಕ್ಕಿ ಕೆಂಚೆಗುಡ್ಡೆ ಪುಟ್ಟ ಕೆರೆ (10) ಹೊಮ್ಮಿಂಗನ ಹಳ್ಳಿ ಪಿಕಪ್ 11. ಎಡವನ ಹಳ್ಳಿ ಪಿಕಪ್

ಆ) 1992-93ನೇ ಸಾಲಿನಲ್ಲಿ ಈ ಕೆರೆಗಳನ್ನು ಮತ್ತು ಪಿಕಪ್‌ಗಳನ್ನು ಜಿಲ್ಲಾ ಪರಿಷತ್ ಮತಿಯಿಂದ ಸಣ್ಣ ನೀರಾವರಿ ವಲಯದ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ. ಇವುಗಳ ದುರಸ್ತಿ ಕಾಮಗಾರಿಗಳಿಗೆ

1993-94ರಲ್ಲಿ 21,473.00 ರೂ. ಖರ್ಚು

1994-95ರಲ್ಲಿ 1,12,802.00 ರೂ. ಮಾಡಲಾಗಿದೆ

1995-96ರಲ್ಲಿ ಈವರೆಗೆ ಯಾವುದೇ ಖರ್ಚು ಆಗಿರುವುದಿಲ್ಲ.

ಇ) ಮೇಲೆ ಹೇಳಿದ 9 ಕೆರೆಗಳು ಮತ್ತು 2 ಪಿಕಪ್‌ಗಳನ್ನು ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ದುರಸ್ತಿ ಮಾಡಲಾಗಿದೆ.

ಈ) 1995-96ನೇ ಸಾಲಿನಲ್ಲಿ ಈ ಕೆರೆಗಳ ಮತ್ತು ಪಿಕಪ್‌ಗಳಿಗೆ ಸಂಬಂಧಿಸಿದಂತೆ 67,900.00 ರೂ.ಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಸಾರಾಯಿ ಮಾರಾಟದಿಂದ ಬರುವ ಆದಾಯ

24 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರಕ್ಕೆ ಸಾರಾಯಿ ಮಾರಾಟದಿಂದ ಕಳೆದ 5 ವರ್ಷಗಳಲ್ಲಿ ಬಂದಿರುವ ಆದಾಯವೆಷ್ಟು? (ವರ್ಷವಾರು ವಿವರ ಸಲ್ಲಿಸುವುದು)